ಮಾಡಿದ್ದಾರೆಂದು ಹೇಳಿದ್ದೀರಿ, ಅವರು ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಬೇಕಾಗುತ್ತದೆ, ತಾವು ಆಗಾಗ ಲೋಕಸಬೆಯ ಸದಸ್ಯರುಗಳನ್ನು ಸಭೆಗೆ ಕರೆಯುತ್ತೀರಿ, ಅವರ ಮುಖಾಂತರ ಅಮೆಂಡ್‌ಮೆಂಟ್ ಆಗಲು ಮೂವ್ ಮಾಡಿಸಿದರೆ ಒಳ್ಳೆಯದು, ಇದರ ಅಗತ್ಯತೆ ಇದೆ. ಇಲ್ಲಿ ಪ್ರಾಥಮಿಕ ಶಿಕ್ಷಕರು ಶಿಕ್ಷಕರಾಗಿರುವುದರಿಂದ ಅವರಿಗೂ ಮತದಾನದ ಹಕ್ಕು ಸಿಗಬೇಕಾಗುತ್ತದೆ. ಅದಕ್ಕೋಸ್ಕರ ತಾವು ಲೋಕಸಭೆಯ ಸದಸ್ಯರನ್ನು ಇದು ಅಮೆಂಡ್‌ಮೆಂಟ್ ಆಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪನವರು ಪ್ರಶ್ನೆ ಕಳುಹಿಸುವ ಮೂಲಕ ಈ ಕ್ಷೇತ್ರದಲ್ಲಿ ಮೂಲಭೂತ ಸುಧಾರಣೆ ತರಬೇಕೆನ್ನುವಂತಹ ದಿವ್ಯ ದೃಷ್ಟಿಯನ್ನು ಇಟ್ಟುಕೊಂಡು ಇದನ್ನು ಕಳುಹಿಸಿದ್ದಾರೆ, ನಾನು ಈ ತತ್ವವನ್ನು ಒಪ್ಪುತ್ತೇನೆ; in principle ನಾವು ಒಪ್ಪುತ್ತೇವೆ. ಕೇಂದ್ರ ಸರ್ಕಾರ ಈ ಸಂಬಂಧದಲ್ಲಿ ತಿದ್ದುಪಡಿಯನ್ನು ತರುವುದಕ್ಕೆ ಮುಂದೆ ಬರಬೇಕೆಂದು ನಾನು ಅವರಿಗೆ ಸೂಚನೆ ಮಾಡುತ್ತೇನೆ.

ಚಿಂತಾಮಣಿ ಸರ್ಕಾರಿ ಪಾಲಿಟೆಕ್ನಿಕ್‌ಗೆ ಕುಡಿಯುವ ನೀರು ಒದಗಿಸುವುದು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

9(17) - ಶ್ರೀ. ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

1) ಚಿಂತಾಮಣಿ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಚಿಂತಾಮಣಿ ನಗರಸಭೆಯ ಆಯುಕ್ತರವರಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ದಿನಾಂಕ: 26-12-2000 ಮತ್ತು 13-8-2001 ರಲ್ಲಿ ಪತ್ರಗಳನ್ನು ಬರೆದಿರುವುದು ನಿಜವೇ?

2) ಹಾಗಿದ್ದಲ್ಲಿ, ಕುಡಿಯುವ ನೀರು ಸರಿಯಾಗಿ ಒದಗಿಸದೇ, ನಿರ್ಲಕ್ಷ್ಯ ತೋರಿಸಿರುವಂತಹ ನಗರಸಭೆಯ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

3) ಪಾಲಿಟೆಕ್ನಿಕ್ ಪಕ್ಕದಲ್ಲಿ ಸಾರ್ವಜನಿಕ ಚರಂಡಿ ಇದ್ದು, ಖಾಸಗಿ ಬಸ್ ನಿಲ್ದಾಣ ಮತ್ತು ಇತರೆ ಭಾಗಗಳಿಂದ ಕಲ್ಮಷ ಹೊಂದಿದ ನೀರು ಈ ಚರಂಡಿಯಲ್ಲಿ ಸರಾಗವಾಗಿ ಹಾದುಹೋಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

1) ಹೌದು

2) ಕೊಳವೆ ಪೈಪುಗಳ ಮುಖಾಂತರ ನೀರು ಸರಬರಾಜು ಮಾಡುವ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದೆ. ಆದ್ದರಿಂದ, ನೌಕರರ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

3) ರೂ. 2.4 ಲಕ್ಷಗಳ ಅಂದಾಜಿನಲ್ಲಿ ಈ ಒಳಚರಂಡಿ ನೀರಿನ ದಿಕ್ಕನ್ನು ಬದಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ನಗರಸಭೆಯ ಆಯುಕ್ತರಿಗೆ ದಿ: 26.12.2000 ರಲ್ಲಿ ಮತ್ತು ದಿ: 13.8.2001 ರಲ್ಲಿ ಎರಡು ಪತ್ರಗಳನ್ನು ಬರೆದಿದ್ದಾರೆ. ಆ ಸಂಖ್ಯೆಯಲ್ಲಿ 800 ಜನ ಮಕ್ಕಳು ಇದ್ದು ಬಹಳ ಚೆನ್ನಾಗಿ ನಡೆಯುತ್ತಿದೆ. ಅಲ್ಲಿ ನೀರಿನ ಸೌಲಭ್ಯ ಸರಿಯಾಗಿ ಇಲ್ಲ, ಆದರೆ ಈ ವಿಚಾರವಾಗಿ ಪ್ರಾಂಶುಪಾಲರು ನಗರಸಭೆಗೆ ಎರಡು ಪತ್ರಗಳನ್ನು ಬರೆದು ಎರಡು ವರ್ಷಗಳಾದರೂ ಇವತ್ತಿನವರೆಗೂ ನೀರು ಸರಬರಾಜು ಸರಿಯಾಗಿ ಆಗಿಲ್ಲ, ಇದರ ಜೊತೆಗೆ ಪಾಲಿಟೆಕ್ನಿಕ್ ಪಕ್ಕದಲ್ಲೆ ಒಳಚರಂಡಿ ಇಲ್ಲದೇ ನೀರು ಮೇಲೆ ಚರಂಡಿಯಲ್ಲಿ ಹೋಗುತ್ತಿದೆ. ಅದರಿಂದ ವಾಸನೆಯಾಗಿ ಪಾಪ ಮಕ್ಕಳು ತೊಂದರೆ ಪಡುತ್ತಿದ್ದಾರೆ. ತಾವು ಇದಕ್ಕೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ವಿಚಾರವಾಗಿ ಪ್ರಾಂಶುಪಾಲರು ಪತ್ರವನ್ನು ಬರೆದಿದ್ದಾರೆ. ಅದಕ್ಕೆ ಇವರು ಕೊಳವೆ ಪೈಪ್‌ಗಳ ಮುಖಾಂತರ ನೀರು ಸರಬರಾಜು ಮಾಡುವ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದೆ ಎಂದು ಹೇಳಿದ್ದಾರೆ, ಮತ್ತೆ ಇನ್ನೊಂದು ಒಳಚರಂಡಿ ನೀರಿನ ದಿಕ್ಕನ್ನು ಬದಲಿಸಲು 2.4 ಲಕ್ಷ ರೂ.ಗಳ ಅಂದಾಜಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ದಯಮಾಡಿ ಈ ಹಣ ಸರ್ಕಾರ ಕೊಡುತ್ತಿದೆಯೋ, ಇಲ್ಲವೋ, ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ. ಈ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕೋಲಾರಕ್ಕೆ ಹೋಗಬೇಕಾದುದ್ದನ್ನು ಅವರ ತಂದೆಯವರು ಬಹಳ ಕಷ್ಟಪಟ್ಟು ಇಲ್ಲಿಗೆ ಹಾಕಿಸಿಕೊಂಡಿದ್ದಾರೆ, ಆ ಕಾಲೇಜಿನ ಪ್ರಾಂಶುಪಾಲರು ನೀರು ಕೊಡಬೇಕೆಂದು ಕೇಳಿದ್ದಾರೆ. ನಮ್ಮ ಮಾಹಿತಿಯ ಪ್ರಕಾರ ಚಿಂತಾಮಣಿಯಲ್ಲಿ ನೀರಿನ ಸಮಸ್ಯೆ ಇಲ್ಲ, ಪ್ರತಿನಿತ್ಯ ಪೈಪ್‌ಗಳ ಮುಖಾಂತರ ನೀರು ಸಪ್ಲೈ ಆಗುತ್ತಿದೆ. ಅದರ ಪಕ್ಕದಲ್ಲಿ ಒಂದು ಚರಂಡಿ ಏನು ಇದೆ, ಇದರಿಂದ ವಾಸನೆ ಆಗುತ್ತಿದೆ. ಹೊಸ ತಿದ್ದುಪಡಿಯ ಪ್ರಕಾರ ಈಗ ತಾವು ಸಿ.ಎಂ.ಸಿಯ ಸದಸ್ಯರು ಆಗಿದ್ದೀರಿ, ತಮ್ಮ ಎಲ್ಲಾ ಪ್ರಭಾವವನ್ನು ಸಿ.ಎಂ.ಸಿ ಮೇಲೆ ಬೀರುವಂತಹ ಹಕ್ಕು ಕಾನೂನಿನ ರೀತಿಯಲ್ಲಿ ಅವಕಾಶವಿದೆ. ಮತ್ತೆ ಈಗಾಗಲೇ ಜಿಲ್ಲಾಧಿಕಾರಿಗಳು 2.4 ಲಕ್ಷ ರೂಪಾಯಿಗಳ ಎಸ್ಟೀಮೆಟ್ ಮಾಡಿ ಈ ಚರಂಡಿಯನ್ನು ಬೇರೆ ಕಡೆಗೆ ತಿರುಗಿಸುವಂಥಾದ್ದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಈ ಕೆಲಸಕ್ಕೆ ಡಿ.ಸಿ.ಯವರು ಅನುಮತಿಯನ್ನು ಕೊಡುತ್ತಾರೆ. ನಿಮಗೆ ಮಾನ್ಯ ಮುಖ್ಯಮಂತ್ರಿಯವರೂ ಸಹ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣವನ್ನು ತಾವು ಉಪಯೋಗ ಮಾಡಿಕೊಂಡರೆ ಈ ಸಮಸ್ಯೆ ಆದಷ್ಟು ಬೇಗ ಬಗೆಹರಿಯುತ್ತದೆ. ತಾವು ಇದಕ್ಕೆ ಮುಂಜಾಗರೂಕರಾಗಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಈ ಬಗ್ಗೆ ಹಿಂದೆ ಕೂಡ ಪ್ರಶ್ನೆ ಮಾಡಿದ್ದೇವೆ, ಅಲ್ಲಿ ಏನಾಗುತ್ತದೆ ಎಂದರೆ, ಅಲ್ಲಿ ಕಮೀಶನರು ಬರುತ್ತಾರಲ್ಲಾ ಅವರಿಗೆ ಈ ಕಡೆ ಶಾಸಕರು

ಮಾತನಾಡುವ ಪ್ರಶ್ನೆಯೇ ಇರುವುದಿಲ್ಲ. ಹಿಂದೆ ಒಬ್ಬ ಕಮೀಷನರ್ ಇದ್ದರು, ಅವರು ಕೋಲಾರದಲ್ಲಿ ಅವ್ಯವಹಾರ ಮಾಡಿ, ಗಲಾಟೆಯೂ ಆಗಿ, ಲೋಕಾಯುಕ್ತದವರು ನೋಟೀಸ್ ಕೊಟ್ಟು, ಅದನ್ನು ಎಲ್ಲಾ ಕಂಡು ಹಿಡಿದಿದ್ದಾರೆ. ಆದರೂ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ನಾವು ಏನು ಹೇಳಿದರೂ ಮಾಡುವುದಿಲ್ಲ, ನಾವು ಏನಾದರೂ ಅವರಿಗೆ ಹೇಳಿದರೂ ಅವರು ಮಾಡುತ್ತಿಲ್ಲ. ಈ ರೀತಿಯಾಗಿ ಎರಡು ವರ್ಷಗಳಿಂದಲೂ ಆಗಿರುವಂಥಾದ್ದು, ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುವುದೆನೆಂದರೆ ಇವತ್ತು ಸರ್ಕಾರ ಎಷ್ಟೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ಅವನ್ನು ಕಾರ್ಯರೂಪಕ್ಕೆ ತರಬೇಕಾದರೆ ಅಧಿಕಾರಿಗಳು ಮುಖ್ಯವಾಗಿ ಅವರ ಮೇಲೆ ಒಳ್ಳೆಯ ಹಿಡಿತವನ್ನು ಸಾಧಿಸಿದರೆ ಖಂಡಿತ ಒಳ್ಳೆಯದಾಗುತ್ತದೆ. ಅದನ್ನು ಅವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಈಗ ಇರುರಂತಹ ಕಮೀಷನರ್ ಅವರನ್ನು ತಮ್ಮ ಹತ್ತಿರ ಕಳುಹಿಸುತ್ತೇನೆ, ತಾವು ಅವರೊಡನೆ ಕುಳಿತು ಚರ್ಚೆ ಮಾಡಿ, ಈ ಸಮಸ್ಯೆ ಬಗೆಹರಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಪೊಲೀಸ್ ಸಿಬ್ಬಂದಿಗಳ ಕೊರತೆ ಹಾಗೂ ಪೊಲೀಸ್ ಮೊಕದ್ದಮೆಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

10(47) - ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ನಿಗದಪಡಿಸಿರುವ ಜನಸಂಖ್ಯೆಗನುಗುಣವಾಗಿ ಗಮುಗುಣವಾಗಿ ಪೊಲೀಸ್ ಸಿಬ್ಬಂದಿಯು ಇರಬೇಕಾಗಿರುವ ಪ್ರಮಾಣವೆಷ್ಟು?

ಆ) ಈ ಪ್ರಮಾಣವನ್ನು ಯಾವಾಗ ನಿಗದಿಪಡಿಸಲಾಗಿದೆ?

ಇ) ಈ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿ ಇದ್ದಾರೆಯೇ; ಇಲ್ಲಿದಿದ್ದಲ್ಲಿ ಯಾವಾಗ ತುಂಬಲಾಗುವುದು;

ಈ) ಕಳೆದ 3 ವರ್ಷಗಳ ಅವಧಿಯಲ್ಲಿ ದೊಡ್ಡಬಳ್ಳಾಪುರ ನಗರ ಮತ್ತು ತಾಲ್ಲೂಕಿನಲ್ಲಿ ಬರುವ ಠಾಣೆಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಯಾವುದೇ ಪ್ರಮಾಣವನ್ನು ನಿಗದಿ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ದಾಖಲಾಗಿರುವ ಮೊಕದ್ದಮೆಗಳ ವಿವರಗಳು: